UASB LIBRARY
Newspaper Clippings



Pg .1 Saturday 06-03-2021 **Jai Kisan**

'ಕೃಷಿತೋ ನಾಸ್ತಿ ದುರ್ಭಿಕ್ಷಂ'

"ನೇಗಿಲ ಕುಲದೊಳಗಡಿದ ಕರ್ಮ, ನೆಗಿಲ ಮೇಲೆಯೇ ನಿಂತಿದೆ ಧರ್ಮ": ಬುದ್ಧಹು



ಡಾ. ರಾಜೇಂದ್ರ ಪೋದ್ದಾರ
ವಾಲ್ಮಿ ನಿದೇಶಕರು

ಪ್ರಕೃತಿ

ಭಾರತದ ಕೃಷಿ ಇದು ಸಂಕಷ್ಟದಲ್ಲಿದೆ. ಇಂತಹ ಸಂಕಷ್ಟದ ಒಟ್ಟಾರೆ ಚಿತ್ರಣವನ್ನು ಕೇವಲ ಸ್ಥಾನೀಯವಾಗಿ ನೋಡದೇ ಜಾಗತಿಕ ಬದಲಾವಣೆಗಳ ಒಟ್ಟಿಲೆಯಲ್ಲಿ ನೋಡಬೇಕಾಗಿದೆ. ಆ ಮೂಲಕ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಅನುಕೂಲವಾಗುವುದು. ಕೃಷಿ ಬಿಕ್ಕಟ್ಟು ಅನೇಕ ಆಯಾಮಗಳನ್ನು ಹೊಂದಿದೆ. ಅವುಗಳ ಒಂದಿಷ್ಟಮ್ಮು ಏಷಾಗಿ ನೈಸರ್ಗಿಕ, ಆರ್ಥಶಾಸ್ತ್ರೀಯ ಹಾಗೂ ನೀತಿ ನಿರೂಪಣೆ/ ಸಾಂಸ್ಥಿಕ ಕಾರಣಗಳಿವೆ. ಕೃಷಿ ಬಿಕ್ಕಟ್ಟು ಕುರಿತವಾಗುತ್ತಿರುವ ಕೃಷಿ ಉತ್ಪಾದಕತೆ, ಉತ್ಪಾದನೆಹಾಗೂಆಳಮುಖವಾಗುತ್ತಿರುವಆದಾಯದ ಸ್ವರೂಪವನ್ನು ಹೊಂದಿವೆ. ಕೊನೆಗೆ ಕೃಷಿ ಸಾಲ ಹಾಗೂ ರೈತ ಆತ್ಮಹತ್ಯೆಯಂತಹ ಅಪಘಾತಗಳಿಗೆ ಎಡೆಮಾಡಿಕೊಡುತ್ತಿದೆ. ಈ ಸಂದರ್ಭದಲ್ಲಿಕೃಷಿತಜ್ಞ ಡಾ. ಎಮ್. ಎಸ್. ಸ್ವಾಮಿನಾಥನ್ ಅವರು 2004 ರಲ್ಲಿನಗೆ ಈಮೇಲ್ ಮೂಲಕ ವೈಯಕ್ತಿಕವಾಗಿ ನೀಡಿದ ಸಲಹೆ ನೆನಪಾಗುತ್ತದೆ: "ಡಾ. ಪೋದ್ದಾರ್ ಈಘಟನೆಗಳುಕೊನೆಗೊಳ್ಳಬೇಕು". ಪ್ರಾದು ಕೃಷಿ ಸಂಕಷ್ಟ ಕೊನೆಗೊಳ್ಳಬೇಕು, ಕೃಷಿಕ ನೆಮ್ಮದಿಯಿಂದ ಬದುಕಬೇಕು.

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಆಂಶ ಅಂಶಗಳು ಬೆಳವಣಿಗೆಯನ್ನುತೋರಿಸಿದಾಗ್ಯೂಕೃಷಿಕರಬದುಕುಬದಿವಾಗಿಯಾಗುತ್ತಿರುವುದು ಎದ್ದು ಕಾಣುತ್ತದೆ. ಆಗ್ಗೆ ಹುಚ್ಚಿಗೆ ಕನ್ನಡಿ ಬೇಕೆ? ಒಂದೆಡೆ ಕೃಷಿ ಕ್ಷೇತ್ರದ ಮೂಲಾಧಾರವಾದ ಸಾಗುವಳಿ ಕ್ಷೇತ್ರವು ದಿನದಿಂದ ದಿನಕ್ಕೆ ನಶಿಸುತ್ತಿದೆ. ಜೊತೆಗೆ ಭೂಮಿಯ ಫಲವತ್ತತೆ ಕುಂಠಿತವಾಗುತ್ತಿದೆ. ಇದು ಕೃಷಿ ಉತ್ಪಾದಕತೆಗೆ ಮಾರಕವಾಗಿದೆ. ಕೃಷಿ ಉತ್ಪಾದನಾ ವೆಚ್ಚವು ದಿನದಿಂದ ದಿನಕ್ಕೆ ಜೆಚ್ಚಾಗುತ್ತಿದ್ದು, ಉತ್ಪನ್ನಗಳ ಬೆಲೆ ಪೂರಕವಾಗಿದೆ ಕೃಷಿ ಕ್ಷೇತ್ರವು ನಿವ್ವಳ ನಷ್ಟವನ್ನು ಅನುಭವಿಸುತ್ತಿದೆ. ಭಾರತದ ಸಂದರ್ಭದಲ್ಲಿ ಕೃಷಿ ಒಂದು ಜೀವನೋಪಾಯವಾಗಿರುವುದರಿಂದ ರೈತ ಕೃಷಿಯಲ್ಲಿ ಮುಂದುವರಿಯಲೇಬೇಕಾಗುತ್ತದೆ. ಹೀಗೆ ಮುಂದುವರಿಯಬೇಕಾದ ಅಸಹಾಯಕತೆಯಿಂದ ಅವನು ಸಾಲಕ್ಕೆ ಶರಣಾಗುತ್ತಾನೆ. ಸಾಲದ ಬಲ್ಲಿ ಹಾಗೂಚಕ್ರ ಬಲ್ಲಿಗಳ ಚಕ್ರವ್ಯೂಹದಲ್ಲಿ ಸಿಲುಕಿದರೈತಯಾಂ ಭಾರದವಿಷಮ ವೃತ್ತದಲ್ಲಿಅಸಹಾಯಕನಿಗಾಗುತ್ತದೆ. ಇದು, ಕರ್ನಾಟಕವೂಸೇರಿದಂತೆ ಭಾರತದ ಯಾವುದೇ ರಾಜ್ಯದ ಸಹಜ ಮತ್ತು ನೈಜ ಚಿತ್ರಣವಾಗಿದೆ.



ಕೃಷಿ ಅಧ್ಯಯನ ವರದಿಗಳ ಪ್ರಕಾರ ದೇಶದಲ್ಲಿ ಹಾಗೂ ಕರ್ನಾಟಕದಲ್ಲಿ ಕೃಷಿ ಹಾಗೂ ಗ್ರಾಮೀಣ ಮೂಲಭೂತ ಬಂಡವಾಳ ಹೂಡಿಕೆ ವರ್ಷದಿಂದ ವರ್ಷಕ್ಕೆ ಇಳಿಮುಖವಾಗಿದೆ. ಕೃಷಿ ಸಂಕಷ್ಟದ ಮೂಲ ಸಾಮಾಜಿಕ ಆಧಾರ ಮನೋವೈಜ್ಞಾನಿಕವಾಗಿರದೇ ರೈತನ ಆರ್ಥಿಕತೆ ಎಂಬ ಸತ್ಯದ ಆರಿವಾಗಬೇಕಾಗಿದೆ. ರೈತನಿಗೂ ಕೃಷಿ ಮೆತ್ತಿಗಳ ಜೊತೆಗೆ ಇತರ ನಾಗರಿಕರಂತೆ ಸಾಮಾಜಿಕ, ಧಾರ್ಮಿಕ, ಕ್ಷೇತ್ರಗಳಿಗೆ ಆವಶ್ಯಕತೆಗಳು ಹಾಗೂ ಬಿರ್ಚು ಮೆತ್ತಿಗಳಿರುತ್ತವೆ. ಸಂಘಟಿತ ಕ್ಷೇತ್ರಗಳಲ್ಲಿರುವಂತೆ ರೈತನಿಗೆ ಯಾವುದೇ ತುಟ್ಟಿಭತ್ಯೆ, ಆರೋಗ್ಯ ಭತ್ತೆ, ಪಿಂಚಣಿಯಂತಹ ಸಾಮಾಜಿಕ ಭದ್ರತೆಗಳ ಅನುಪಸ್ಥಿತಿಯಲ್ಲಿ ರೈತ ತನ್ನ ಜೀವನೋಪಾಯಕ್ಕಾಗಿ ಸಾಲ ಮಾಡಬೇಕಾಗುತ್ತದೆ. ಸಾಲ ಶೂಲಕ್ಕೆ ದಾರಿಯಾಗುತ್ತದೆ.

ಕೃಷಿ ವಿವಾಳತನಕ್ಕೆ ನೇರ ಕಾರಣವಾದ ನೈಸರ್ಗಿಕ ಸಂಪನ್ಮೂಲಗಳ ನಿರಂತರ ಕೊಷಣೆ ನಿಲ್ಲಬೇಕು. ಅವುಗಳ ಸಂರಕ್ಷಣೆ ಹಾಗೂ ಬಳಕೆ ಮತ್ತು ಸೂಕ್ತ ಕ್ರಮಗಳ ಅವಶ್ಯಕತೆ ಇದೆ. ನಾಗಾಲೋಟದಲ್ಲಿ ಬೆಳೆಯುತ್ತಿರುವ ಆರ್ಥವ್ಯವಸ್ಥೆಯಲ್ಲಿ ನೀರಿಗಾಗಿ ಉಂಟಾಗುತ್ತಿರುವ ಬೇಡಿಕೆ ಹಾಗೂ ಪೂರೈಕೆಗಳ ಮಧ್ಯೆ ಅಗಾಧವಾದ ಅಂತರದಿಂದಾಗಿ ಜಲ ಸಂಕಷ್ಟ ಉದ್ಭವಾಗಿದೆ. ಜಲ ಸಂಕಷ್ಟ ಕೃಷಿ ಅಭಿವೃದ್ಧಿಗೆ ಮಾರಕವಾಗುತ್ತಿದೆ. ಆದೇ ರೀತಿ ಹವಾಮಾನ ವೈಪರೀತ್ಯವು ಮುಂಬರುವ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಆಗಾಧವಾದ ಮತ್ತರಣಾಮಗಳನ್ನು ಬೀರುವ ಸಾಧ್ಯತೆಗಳಿವೆ. ಅವುಗಳ ಉಪಶಮನಕ್ಕಾಗಿ ಸೂಕ್ತ ಕ್ರಮಗಳನ್ನು ಕೈಕೊಳ್ಳುವ ಅವಶ್ಯಕತೆ ಇದೆ. ಮುಖ್ಯವಾಗಿ ಹವಾಮಾನ ವೈಪರೀತ್ಯ ಹೊಂದಾಣಿಕೆ ಹಾಗೂ ಶಮನ ಕ್ರಮಗಳನ್ನು ತುರ್ತಾಗಿ ಕೈಕೊಳ್ಳಬೇಕಾಗಿದೆ.

ರೈತರು ಸ್ವಾವಲಂಬಿಗಳಾಗಲು ಕೃಷಿ ಹಾಗೂ ಗ್ರಾಮೀಣ ಪ್ರದೇಶಗಳ ಆವಶ್ಯಕತೆಗಳಿಗನುಗುಣವಾಗಿ ಬಂಡವಾಳ ಹೂಡಿಕೆಯಾಗಬೇಕು. ದೇಶದ ಒಟ್ಟಾರೆ ಬಂಡವಾಳ ಹೂಡಿಕೆಯ ಕನಿಷ್ಠ ಶೇ. 51 ರಷ್ಟಾದರೂ ಆ ಕ್ಷೇತ್ರಗಳಿಗೆ ಮೀಸಲಿಡಬೇಕು. ಸಮರ್ಪಕವಾದ ಬಂಡವಾಳ ಹೂಡಿಕೆಗೆ, ಉಳುಮೆಗೆ ಹಾಗೂ ಕನಿಷ್ಠ ನಿವ್ವಳ ಲಾಭಗಳಿಸಲು ಯೋಗ್ಯವಾದ ಹಿಡುವಳಿಗಳ ಸೃಷ್ಟಿಯಾಗಬೇಕು. ಆಧುನಿಕ ಕೃಷಿ ತಂತ್ರಜ್ಞಾನದ ಮೂಲಕ ರೈತನ ಹಾಗೂವಲಂಬತಹೆಚ್ಚಾಗಿ ಆ ಮೂಲಕ ನಿರಂತರವಾಗಿ ಆದಾಯೋತ್ಪಾದನೆ ನಡೆಯುತ್ತಿದೆ. ರೈತನ ಸ್ವಾವಲಂಬನೆಯ ಅಂಶಗಳನ್ನು ಗುರುತಿಸಿ, ಉತ್ಪಾದನೆಗೆ ಬೇಕಾಗುವ ನೈಸರ್ಗಿಕವಾಗಿ ಹಾಗೂ ಸ್ವಾನೀಯವಾಗಿ ದೊರೆಯುವ ಪರಿಸರದ ಪರಿಕರಗಳ ಪೂರೈಕೆಯನ್ನು ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಮಾಡಲು ಸಾಧ್ಯವಿದೆ. ಆದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕಾಗಿದೆ. ಕೃಷಿ ಉತ್ಪಾದನಾ ಏರ್ಪಾಡು-ಮೆತ್ತಿಗಳನ್ನಾಧರಿಸಿ ಬಂದುವಾದ ಪಳ್ಳಗಳ ಸ್ಥಾವಲಂಬನೆ, ಸ್ವಾತಂತ್ರ್ಯ ಹಾಗೂ ಘನತೆಗಳನ್ನು ಕಾಪಾಡಲು ಸಾಧ್ಯ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂದ ದೇವದಲ್ಲಿ ಕೃಷಿ ಮತ್ತಿತರೆಗೆ ಸಮಗ್ರವಾದ ಕೃಷಿ ನೀತಿಯ ಕೊರತೆಯೇ ಕಾರಣವೆನ್ನಬಹುದು. ದೇಶೀ ಸಂಸ್ಕೃತಿ, ಆವಕಾಶಗಳು, ವೈಜ್ಞಾನಿಕ ಸಾಧ್ಯತೆ ಬಾಧ್ಯತೆಗಳನ್ನಾಧರಿಸಿದ ದೇಶದ ಪ್ರತೀ ರೈತನಿಗೂ ನೆಮ್ಮದಿಯ ಜೀವನ ನಡೆಸಲು ಅವಕಾಶಗಳನ್ನು ಒದಗಿಸಿಕೊಡುವ ಸಮಗ್ರ ಸುಸ್ಥಿರ ಕೃಷಿ ನೀತಿ ನಮಗಿಂಯ ಬೇಕಾಗಿದೆ. ನಮ್ಮ ಆರ್ಥವ್ಯವಸ್ಥೆಗೆ ಅನುಸರಿಸುತ್ತಿರುವ ಅಭಿವೃದ್ಧಿ ಪಥದ ಬಗ್ಗೆ ಆಮೂಲಾಗ್ರವಾದ ಚಿಂತನೆ ನಡೆಯಬೇಕಿದೆ. ನಾನಿಂದು ಇಡುತ್ತಿರುವ ಹೆಜ್ಜೆ ಸಮೂಹದ ಕಟ್ಟ ಕಡೆಯ ವ್ಯಕ್ತಿಯ ಜೀವನದಲ್ಲಿ ಏನಾದರೂ ಗುಣಾತ್ಮಕ ಬದಲಾವಣೆಯನ್ನು ತರಬಹುದೇ ಎಂಬ ಚಿಂತನೆಯ ಜೊತೆಗೆ ನಾಗರಿಕ ಸಮಾಜ ಕೃಷಿಕ ಮತ್ತು ಕೃಷಿಕನನ್ನು ಗೌರವದಿಂದ ಕಾಣುವ ಧೋರಣೆ ಬೆಳೆಸಿಕೊಳ್ಳಬೇಕಾಗಿದೆ.

06-03-2021 Sk Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in



Chief Minister B S Yediyurappa appointed film actor Darshan as the Brand Ambassador of the Agriculture department at a programme in Vikasa Soudha in Bengaluru on Friday. Minister for Agriculture B C Patil is also seen.
DH PHOTO/S K DINESH

Actor Darshan is now Agri dept brand ambassador

BENGALURU, DHNS: Sandalwood star Darshan officially took charge as the brand ambassador of Karnataka Agriculture department on Friday.

The actor is popularly known as 'Challenging Star' in the film industry. Appreciating the actor's gesture, Chief Minister B S Yediyurappa lauded the actor for not seeking any remuneration for his services. "I wish to thank Darshan on behalf of the farmers of the state," he said.

Ahead of the release of Darshan's film 'Robert', Yediyurappa said he too was keen on watching it. Agriculture Minister B C Patil said Darshan himself was an agriculturist. "He has also agreed to take part in an interaction with the farmers," he added.

06-03-2021 Dec Hrd Pg 04

Agricultural trade: Experts suggest govt should levy market fee on corporates

BV.Shivashankar
@timesgroup.com

Bengaluru: Chief minister BS Yediyurappa, who will present his eighth state budget on Monday, is reportedly considering a policy of levying an equal market fee on all traders. During pre-budget consultations, many experts suggested that the revenue-starved state government should impose a fee on corporate and individual traders involved in the business of agriculture produce outside APMC yards.

Currently, trade conducted inside APMC yards attracts a market fee of 60 paise per every transaction of Rs 100. No such charge is levied on the business taking place outside the yards. "This has created a disparity among traders and dented government revenue. The government can rectify it by levying an equal market fee on all traders, including corporates, who want to buy produce directly from farmers," said PD Shirahatti, who heads the APMC committee of the Federation of Karnataka Chambers of Commerce and Industries (FKCCI).



AFP

UNEVEN FIELD? Trade inside APMCs attracts a market fee, but business outside doesn't

A delegation led by FKCCI had urged Yediyurappa to announce such a policy last month. It said that the government should create a level playing field by either making all types of traders pay a market fee or exempting everyone. The government then issued a circular seeking views of all stakeholders on the fee proposal. Shirahatti sees the development as a positive response.

"Charging a market fee from corporates makes sense. Agricultural marketing is a state subject and the state government is well within its rights to propose such a fee. The government should treat the profit earned by corporates from agricultural trade as corporate income and levy the fee accordingly," said Vinod Vyasulu, a former director of the Centre for Budget and Policy Studies.

In May last year, the state government opened up the agriculture market by amending the Karnataka Agricultural Produce Marketing Act through an ordinance. The government used to levy a market fee of Rs 1.5 for every transaction of Rs 100. This continued under the amended law. After AMPC traders protested, it reduced it to Re 1 and later to 60 paise.

"The irony is that government revenue came down because of the new policy. The reduction of the market fee coincided with a drastic decrease in the volume of trade taking place inside APMC yards," Shirahatti said. He added the government used to earn annual revenue of about Rs 1,500 crore from 162 APMC yards, when the market fee was Rs 1.5. The revenue is likely to fall to Rs 250 crore now.

06-03-2021 Time of Ind Pg 06

"Never be a prisoner of your past. It was just a lesson, not a life sentence"

UASB
LIBRARY
Newspaper Clippings
Pg .2 Saturday 06-03-2021 Jai Kisan



ಆಲೂಗಡ್ಡೆ ಕೊಳ್ಳಲು ವ್ಯಾಪಾರಸ್ಥರ ಹಿಂದೇಟು | ಹವಾಮಾನ ವೈಪರೀತ್ಯ: ಕೊಳೆಯುತ್ತಿರುವ ಫಸಲು

ಆಲೂಗಡ್ಡೆ ಬೆಲೆ ದಿಢೀರ್ ಕುಸಿತ: ರೈತನಿಗೆ ಸಂಕಷ್ಟ

ನಾರಾಯಣಸ್ವಾಮಿ.ಸಿ.ಎಸ್ ಚಿಕ್ಕಕೋಲಿಗ

ಹೊಸಕೋಟೆ: ಬರಗಾಲದ ಸ್ಥಿತಿಯಲ್ಲೂ ಇರುವ ಅಲ್ಪಸ್ವಲ್ಪ ಬೋರ್‌ವೆಲ್ ನೀರಿನಲ್ಲಿಯೇ ಬೆವರು ಸುರಿಸಿ ಬೆಳೆದ ಆಲೂಗಡ್ಡೆ ಬೆಲೆ ಕುಸಿತವಾಗಿ ವ್ಯಾಪಾರಸ್ಥರು ಖರೀದಿಗೆ ಆಸಕ್ತಿ ತೋರದ ಕಾರಣ ಬೆಳೆಗಾರರು ಕಂಗಾಲಾಗಿದ್ದಾರೆ. ಕಣ್ಣೆದುರು ಉತ್ತಮ ಬೆಳೆ ಮಾರಾಟ ಮಾಡಲಾಗದೆ ರೈತರು ಕಣ್ಣೀರಿಡುವಂತಾಗಿದೆ.

ಕಳೆದ ವರ್ಷ ಈ ಸೀಸನ್‌ಲ್ಲಿ 50 ಕೆ.ಜಿ. ಮೂಟೆಗೆ 1,200 ರಿಂದ 1,400 ರು. ದಾಟಿತ್ತು. ಈ ವರ್ಷದ ಆರಂಭದಲ್ಲಿ 50 ಕೆ.ಜಿ. ಆಲೂಗಡ್ಡೆ ಮೂಟೆ 1,000ಕ್ಕೆ ಮಾರಾಟವಾಯಿತು. ಈಗ ಬೆಲೆ 500 ರಿಂದ 700 ರು.ಗೆ ಕುಸಿದಿದೆ, ಕಟಾವಿಗೆ ಬಂದ ಆಲೂಗಡ್ಡೆಯನ್ನು ತೋಟಗಳಲ್ಲಿ ಇಟ್ಟುಕೊಳ್ಳಲಾಗದೆ ಅಸಹಾಯಕ ಸ್ಥಿತಿಯಲ್ಲಿದ್ದಾರೆ.

ಪ್ರತಿ ವರ್ಷದಂತೆ ಈ ಸಲ ಆಲೂಗಡ್ಡೆ ಉತ್ತಮ ಬೆಲೆ ಬರುವುದೆಂಬ ನಿರೀಕ್ಷೆಯಲ್ಲಿ, 50 ಕೆ.ಜಿ. ಚೀಲದ 2 ಎಕರೆಯಲ್ಲಿ ಒಟ್ಟು 4 ಲಕ್ಷ ರು. ಬಂಡವಾಳ ಹೂಡಿ ಆಲೂಗಡ್ಡೆ ಬೆಳೆದಿದ್ದೇವೆ. ಈಗಿನ ಬೆಲೆಗೆ ಮಾರಾಟ ಮಾಡಿದರೆ ಅಸಲು ಸಿಗುತ್ತಿಲ್ಲ, ಹೀಗಿದ್ದರೂ ವ್ಯಾಪಾರಸ್ಥರು ಖರೀದಿ ಮಾಡಲು ಮುಂದೆ ಬರುತ್ತಿಲ್ಲ ಎನ್ನುತ್ತಾರೆ ರೈತ ಜಗದೀಶ್.

ಆಲೂಗಡ್ಡೆಗೆ ಮುಂದಿನ ದಿನಗಳಲ್ಲಿ ಬೆಲೆ ಬರಬಹುದು ಎಂಬ ಲೆಕ್ಕಾಚಾರವಿಟ್ಟು, ಅನೇಕ ರೈತರು ತಮ್ಮ ತೋಟದಲ್ಲೆ ನೆರಳನಡಿ ಆಲೂಗಡ್ಡೆಯನ್ನು ರಾಶಿ ಮಾಡಿ, ಕೆಡದಂತೆ ರಾಸಾಯನಿಕಗಳನ್ನು ಸಿಂಪಡಿಸಿದರೂ, ಬಿಸಿಲಿನ ತಾಪಕ್ಕೆ ರಾಶಿಯಲ್ಲೆ ಆಲೂಗಡ್ಡೆ ಕೊಳೆಯುತ್ತಿದೆ. ವ್ಯಾಪಾರಸ್ಥರು ಕೇಳಿದ ಬೆಲೆಗೆ ಮಾರಾಟ ಮಾಡಲಾಗದ ಸ್ಥಿತಿ ಎದುರಾಗಿದೆ.

ಹವಾಮಾನ ವೈಪರೀತ್ಯ: ಆಲೂಗಡ್ಡೆ ಮಳೆಯಾಶ್ರಿತ ಬೆಳೆಯಾದ ಕಾರಣ ಸೆಪ್ಟಂಬರ್‌ನಲ್ಲಿ ಬಿತ್ತನೆ ಆರಂಭಿಸಿ, ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಬೆಳೆ ಕಟಾವು ಮಾಡುತ್ತಿದ್ದರು. ಈ ಬಾರಿ ಅನಿರೀಕ್ಷಿತ ಹವಾಮಾನ ವೈಪರೀತ್ಯ ಉಂಟಾಗಿ, ಬಿಸಿಲು, ಮಳೆ, ಚಳಿಯ ಲೆಕ್ಕಾಚಾರ ಹಾಕಲು ಸಾಧ್ಯವಾಗದಂತಾಗಿ ಆಲೂಗಡ್ಡೆ ಬೆಳೆದ ರೈತರು ಹೆಚ್ಚು ನಷ್ಟ ಅನುಭವಿಸುವಂತಾಗಿದೆ ಎನ್ನುತ್ತಾರೆ ತೋಟಗಾರಿಕೆ ಅಧಿಕಾರಿಗಳು.

ಖರೀದಿಯೇ ಇಲ್ಲ: ಮಾರುಕಟ್ಟೆಯಲ್ಲಿ ಆಲೂಗಡ್ಡೆ ಬೆಲೆ ಕುಸಿತವಾಗಿದ್ದೆ ತಡ ವ್ಯಾಪಾರಸ್ಥರು ಖರೀದಿಯನ್ನೇ ನಿಲ್ಲಿಸಿದ್ದಾರೆ. ಮೂಟೆಗೆ 1,200 ರು. ಇದ್ದಾಗ ವ್ಯಾಪಾರಿಗಳು ರೈತರ ಮನೆ ಬಾಗಿಲಿಗೆ ಬಂದು, ಬೆಳೆ ಕಟಾವು ಮಾಡಿ ಮೂಟೆಗೆ ತುಂಬುವವರೆಗೆ ಸ್ಥಳ ಬಿಟ್ಟು ಕದಲುತ್ತಿರಲಿಲ್ಲ. ಈಗ ಪರಿಸ್ಥಿತಿ ಉಲ್ಟಾ ಆಗಿ ಬೆಳೆ ಕಟಾವು ಮಾಡುತ್ತಿದ್ದೇವೆ ಎಂದು ದೂರವಾಣಿ ಕರೆ ಮಾಡಿದರೂ, ಸರಿಯಾಗಿ ಸ್ಪಂದಿಸುತ್ತಿಲ್ಲ, ನೆಪ ಹೇಳಿ ನುಣುಚಿಕೊಳ್ಳುತ್ತಿದ್ದಾರೆ.



ಹೊಸಕೋಟೆ ತಾಲೂಕಿನ ನಗರೇನಹಳ್ಳಿಯ ರೈತ ಜಗದೀಶ್ 2 ಎಕರೆ ಪ್ರದೇಶದಲ್ಲಿ ಬೆಳೆದ ಆಲೂಗಡ್ಡೆಯನ್ನು ತೋಟದಲ್ಲಿ ರಾಶಿ ಮಾಡುತ್ತಿರುವುದು.

> ಹವಾಮಾನ ವೈಪರೀತ್ಯದಿಂದ ಫಸಲು ತಡವಾಗಿ ಬಂದಿದೆ. ಬೇರೆ ಭಾಗಗಳಿಂದ ಹೆಚ್ಚಿನ ಆಲೂಗಡ್ಡೆ ಮಾರುಕಟ್ಟೆಗೆ ಬರುತ್ತಿರುವುದರಿಂದ ಬೆಲೆ ಕುಸಿತವಾಗಿದೆ. ಈ ಬಾರಿ ಬಿಸಿಲಿನ ತಾಪ ಹೆಚ್ಚಾಗಿದ್ದು, ತೋಟಗಳಲ್ಲಿ ರಾಶಿ ಹಾಕುವುದರಿಂದ ಕೊಳೆಯುವ ಸಾಧ್ಯತೆ ಹೆಚ್ಚಾಗಿದೆ. ರೈತ್ಯಾಗಾರಗಳಲ್ಲಿಟ್ಟು ಸಂರಕ್ಷಿಸುವುದು ಒಳಿತು.
> – **ಪ್ರಶಾಂತ್** ತೋಟಗಾರಿಕೆ ಸಹಾಯಕ ನಿರ್ದೇಶಕ, ಹೊಸಕೋಟೆ

> ಆಲೂಗಡ್ಡೆಯನ್ನು ಹೈದ್ರಾಬಾದ್, ಕೇರಳ, ಗೋವಾ ಸೇರಿದಂತೆ ಹಲವು ಕಡೆಗಳಿಗೆ ಇಲ್ಲಿಂದ ರಫ್ತು ಮಾಡಲಾಗುತ್ತಿತ್ತು. ಇದೀಗ ಅಲ್ಲಿನ ರೈತರು ಹೆಚ್ಚು ಆಲೂಗಡ್ಡೆ ಬೆಳೆಯುತ್ತಿದ್ದಾರೆ. ಸದ್ಯ ಇಲ್ಲಿನ ಮಾರುಕಟ್ಟೆಗೆ ಬೇರೆ ಕಡೆಗಳಿಂದ ಬರುತ್ತಿದ್ದು, ಹೋಗುತ್ತಿಲ್ಲ, ಹೀಗಾಗಿ ಬೆಲೆ ಕುಸಿತ ಕಂಡಿದೆ.
> – **ಆಂಜಿನಪ್ಪ** ಆಲೂಗಡ್ಡೆ ಮಂಡಿ ವ್ಯಾಪಾರಿ

06-03-2021 Vsv Pg 10

ನಟ ದರ್ಶನ್ ರಾಜ್ಯದ 'ಕೃಷಿ ರಾಯಭಾರಿ'

ಯಾವುದೇ ಸಂಭಾವನೆ ಪಡೆಯದೆ ದೂತನಾದ 'ಡಿ ಬಾಸ್' | ಇದರಿಂದ ಕೃಷಿ ಕ್ಷೇತ್ರಕ್ಕೆ ಮತ್ತಷ್ಟು ಶಕ್ತಿ: ಸಿಎಂ ಬಿಎಸ್‌ವೈ ಹರ್ಷ

ರೈತರ ಜತೆ ನನ್ನದು ರಕ್ತಸಂಬಂಧ: ನಟ ದರ್ಶನ್ ಹೃದಯಸ್ಪರ್ಶಿ ಮಾತು | ರಾಬರ್ಟ್ ಸಿನಿಮಾ ಯಶಸ್ವಿಯಾಗಲಿ: ಬಿ.ಸಿ.ಪಾ.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಖ್ಯಾತ ನಟ ದರ್ಶನ್ ತೂಗುದೀಪ ಶುಕ್ರವಾರ ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಅಧಿಕೃತ ರಾಯಭಾರಿಯಾದರು.

ಯಾವುದೇ ಸಂಭಾವನೆ ಪಡೆಯದೇ ರಾಜ್ಯ ಕೃಷಿ ಇಲಾಖೆಯ ರಾಯಭಾರಿಯಾದ ಅವರನ್ನು ಮಿದ್ದು ಮುದ್ದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ವಿಕಾಸಸೌಧದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ಅವರು, ಚಿತ್ರರಂಗದಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆದಿರುವ ದರ್ಶನ್ ಅವರು ನಟನೆ ಜೊತೆಗೆ ರೈತರಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕೃಷಿ ಕ್ಷೇತ್ರಕ್ಕೆ ಮತ್ತಷ್ಟು ಶಕ್ತಿ ತುಂಬಿದಂತಾಗಿದೆ ಎಂದರು.

ಕೃಷಿ ಭಾವನಾತ್ಮಕ ವಿಚಾರವಲ್ಲ, ರಕ್ತದ ಸಂಬಂಧ: ಕೃಷಿ ಇಲಾಖೆ ರಾಯಭಾರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ನಟ ದರ್ಶನ್, ಎಲ್ಲರೂ ದರ್ಶನ್ ರೈತರೊಂದಿಗೆ ಭಾವನಾತ್ಮಕವಾಗಿ ಬೆರೆತಿದ್ದಾರೆಂದು ಎಲ್ಲರೂ ಹೇಳ್ತಾರೆ. ಆದರೆ, ನನಗೆ ಕೃಷಿ ಎಮೋಷನ್ ಅಲ್ಲ, ಬ್ಲಡ್ ರಿಲೇಷನ್ (ಭಾವನಾತ್ಮಕ ಸಂಗತಿಯಲ್ಲ, ರಕ್ತ ಸಂಬಂಧ) ಆಗಿದೆ. ಸರ್ಕಾರದಲ್ಲಿರುವ ಯೋಜನೆಗಳು ಹಾಗೂ ಸವಲತ್ತುಗಳನ್ನು ತಲುಪಿಸುವ ಜಾಹೀರಾತು ನೀಡುವ ಕೆಲಸ ಮಾಡುತ್ತಿದ್ದೇನೆ. ರೈತರಿಗೆ ಒಳ್ಳೆಯದಾಗುವ ಕೆಲಸಗಳಿಗೆ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಕೃಷಿ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ, ಕೆಲವು ಸೂಪರ್ ಸ್ಟಾರ್‌ಗಳು ಸಂಭಾವನೆ ಪಡೆದು ದೊಡ್ಡ ದೊಡ್ಡ ಕಂಪನಿಗಳಿಗೆ ರಾಯಭಾರಿಗಳಾಗುತ್ತಾರೆ. ಆದರೆ, ರೈತರ ಕಳಕಳಿ ಹೊಂದಿರುವ ದರ್ಶನ್, ಯಾವುದೇ ಸಂಭಾವನೆ ಪಡೆಯದೆ ಕೃಷಿ ಇಲಾಖೆ ರಾಯಭಾರಿಯಾಗಿರುವುದು ಅವರಲ್ಲಿರುವ ಕೃಷಿ ಉತ್ಸಾಹ ಹಾಗೂ ರೈತರ ಕಾಳಜಿಯನ್ನು ತೋರಿಸುತ್ತದೆ. ಇದರ ಜೊತೆಗೆ ಇಲಾಖೆ ಕಾರ್ಯಕ್ರಮವಾದ 'ರೈತರೊಂದಿಗೆ ಒಂದು ದಿನ'ದಲ್ಲಿಯೂ ಪಾಲ್ಗೊಳ್ಳುವುದಾಗಿ ತಿಳಿಸಿದ್ದಾರೆ ಎಂದರು.

ದರ್ಶನ್ ಅವರ ಫಾರ್ಮ್‌ಹೌಸ್‌ನಲ್ಲಿ ಕುದುರೆ, ಜಿಂಕೆಗಳನ್ನೂ ಒಳಗೊಂಡಂತೆ ಸಣ್ಣ ಮೃಗಾಲಯದ ರೀತಿ ಇದೆ ಎಂದ ಅವರು, ಮಾ.11ರಂದು ಬಿಡುಗಡೆಯಾಗಲಿರುವ ರಾಬರ್ಟ್ ಸಿನಿಮಾ ಯಶಸ್ವಿಯಾಗಲಿ ಎಂದು ಹಾರೈಸಿದರು.

ಇದೇ ವೇಳೆ ಕೃಷಿ ಕೈಪಿಡಿ-2021ಯನ್ನು ಬಿಡುಗಡೆ ಮಾಡಲಾಯಿತು. ಇಲಾಖೆ ನಿರ್ದೇಶಕ ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್ ಉಪಸ್ಥಿತರಿದ್ದರು.



ವಿಕಾಸಸೌಧದಲ್ಲಿ ಶುಕ್ರವಾರ ನಟ ದರ್ಶನ್ ಅವರನ್ನು ಕೃಷಿ ಸಚಿವ ಬಿ.ಸಿ. ಪಾಟೀಲ್ ಅಭಿನಂದಿಸಿದರು.

ರಾಬರ್ಟ್ ನೋಡ್ತೇನೆ: ಸಿಎಂ

ದರ್ಶನ್ ಅವರೊಂದಿಗೆ ತುಂಬಾ ಖುಷಿಯಿಂದ ವೇದಿಕೆ ಹಂಚಿಕೊಂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ನಟ ದರ್ಶನ್ ಅಭಿನಯದ ರಾಬರ್ಟ್ ಸಿನಿಮಾ ಇದೇ ಮಾ.11ರಂದು ಬಿಡುಗಡೆಯಾಗುತ್ತಿದೆ. ಸಿನಿಮಾವನ್ನು ನಾನು ಕೂಡ ನೋಡಿ ಖುಷಿ ಪಡುತ್ತೇನೆ ಎಂದರು.

ಕೃಷಿ ಸಲಕರಣೆಗೆ ₹1 ಲಕ್ಷ ಸಹಾಯಧನ: ಬಿ.ಸಿ.ಪಾ.

ಟ್ರ್ಯಾಕ್ಟರ್ ಬಿಟ್ಟು ಉಳಿದ ಸಲಕರಣೆಗೆ ಸಬ್ಸಿಡಿ

ವಿಧಾನ ಪರಿಷತ್ತು: ರೈತರು ಕೃಷಿ ಇಲಾಖೆಯಿಂದ ಕೃಷಿ ಸಲಕರಣೆಗಳನ್ನು ಪಡೆಯಲುಗರಿಷ್ಠ೦ದುಲಕ್ಷರು.ಗಳವರೆಗೆಸಹಾಯಧನಪಡೆಯಬಹುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ಜೆಡಿಎಸ್ ಸದಸ್ಯ ಎನ್.ಆಪ್ಪಾಜಿಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿ ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ (ಟ್ರಾ ್ಯಕ್ಟರ್ ಬಿಟ್ಟು) ಸಾಮಾನ್ಯ ರೈತರಿಗೆ ಶೇ.50, ಪ.ಜಾತಿ, ಪ.ಪಂಗಡದವರಿಗೆ ಶೇ.90ರಷ್ಟು ಸಹಾಯಧನವನ್ನು 1 ಲಕ್ಷ ರು.ಗಳವರೆಗೆ ನೀಡಲಾಗುತ್ತಿದೆ ಎಂದರು.

ಸಾಮಾನ್ಯ ರೈತರು ಸಣ್ಣ ಟ್ರಾ ್ಯಕ್ಟರ್(25 ಪಿಟಿಪಿ ಎಚ್‌ಪಿ) ಖರೀದಿಸಲು 75 ಸಾವಿರ ರು. ಮತ್ತು ಪರಿಶಿಷ್ಟರಿ ರೈತರಿಗೆ 3 ಲಕ್ಷ ರು. ಸಹಾಯಧನ ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ತಾಂತ್ರಿಕ ಮಾನದಂಡಗಳನ್ನು ಪರಿಗಣಿಸಿ ಯಂತ್ರೋಪಕರಣಗಳನ್ನು ಸರಬರಾಜು ಮಾಡುವ ಸಂಸ್ಥೆಗಳನ್ನು ಕೃಷಿ ಇಲಾಖೆ ವತಿಯಿಂದ ನಿಗದಿಪಡಿಸಲಾಗಿರುತ್ತದೆ. ಫ್ರೂಟ್ ಪೋರ್ಟಲ್ ತಂತ್ರಾಂಶದಲ್ಲಿ ನೋಂದಾಯಿತರಾದ ರೈತರು ಮಾತ್ರ ತಾವು ಇಚ್ಛಿಸುವ ಯಂತ್ರೋಪಕರಣಗಳಿಗಾಗಿ ಕೆ-ಕಿಸಾನ್ ತಂತ್ರಾಂಶದಲ್ಲಿ ಆರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ ಎಂದರು.

06-03-2021 Kp Pg 08